**<u>ಪಿ ಡಬ್ಲ್ಯೂ ಃ 3 ಚಿಕ್ಕಗುಳ್ಳಪ್ಪ</u>**

ಸಾಕ್ಷಿಗೆ ದಿನಾಂಕಃ **13.09.2023** ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ಎ.ಪಿ.ಪಿ. ರವರಿಂದ:</u>**

ಈ ಪ್ರಕರಣದ ಆರೋಪಿಯನ್ನು ನಾನು ಈ ಹಿಂದೆ ನೋಡಿದ್ದೇನೆ, ಅವರ ಹೆಸರು ಲೋಕೇಶ. ನಾನು ಸಂಚಾರ ನಿಯಂತ್ರಕರಾಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ದಿ: 10.04.2013 ರಂದು ಹೊಸಹಳ್ಳಿಯಲ್ಲಿ ಬಸ್‌ನಲ್ಲಿ ತಪಾಸಣೆ ಮಾಡಿದಾಗ ಇದೇ ಆರೋಪಿ ನಿಪಿ 3 ಮತ್ತು 4 ನಕಲಿ ಪಾಸ್‌ನ್ನು ಬಳಸಿ ಪ್ರಯಾಣಿಸುತ್ತಿದ್ದರು. ನಂತರ ಆರೋಪಿ ಮತ್ತು ಪಾಸ್‌ನ್ನು ಪೊಲೀಸರಿಗೆ ಒಪ್ಪಿಸಿರುತ್ತೇವೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರು: ಶ್ರೀ ಎಸ್.ವಿ.ಎಸ್. ರವರಿಂದ:</u>**

ನಾನು ಆರೋಪಿಯನ್ನು ಈ ದಿನವೇ ಪ್ರಥಮ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ದಿ: 10.04.2013 ರಂದು ನಾನು ಕೆಎ-09-ಎಫ್.3477 ಬಸ್‌ನ್ನು ಹೊಸಹಳ್ಳಿ ಗ್ರಾಮದಲ್ಲಿ ತನಿಖೆ ಮಾಡಿದ್ದಾಗಿ ಸುಳ್ಳು ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನನ್ನು ಆ ರಸ್ತೆಯಲ್ಲಿ ತಪಾಸಣೆಗಾಗಿ ನೇಮಕ ಮಾಡಿದ ಬಗ್ಗೆ ಪೊಲೀಸರಿಗೆ ದಾಖಲೆ ನೀಡಿದ್ದೇನೆ. ದಿ: 10.04.2013 ರಂದು ಬಸ್‌ನ್ನು ತನಿಖೆಗೆ ಒಳಪಡಿಸಿದಾಗ ಸಮಯ 14-30 ಆಗಿತ್ತು. ನಂತರ ನಾನು ವಿಚಾರವನ್ನು ಮೇಲಾಧಿಕಾರಿಗಳಿಗೆ ಮತ್ತು ಭದ್ರತಾ ನಿಯಂತ್ರಕರಿಗೆ ತಿಳಿಸಿದ್ದು, ದೂರು ನೀಡುವಂತೆ ಹೇಳಿದ್ದು, ನಂತರ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಭದ್ರತಾ ನಿಯಂತ್ರಕರು ಬಂದು ನಕಲಿ ಪಾಸ್ ಆಗಿದ್ದು, ದೂರು ನೀಡಬಹುದೆಂದು ಹೇಳಿದ್ದು, ದೂರು ನೀಡಿರುವ ಬಗ್ಗೆ ದೂರಿನಲ್ಲಿ ಬರೆಸಿಲ್ಲ. ಆ ದಿನ ಭದ್ರತಾ ಅದಿಕಾರಿಗಳು ಬಂದು ದೂರು ನೀಡುವಂತೆ ಹೇಳಿದ್ದಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

2. ಆ ದಿನ ಬಸ್‌ನಲ್ಲಿ 34 ಜನ ಪ್ರಯಾಣಿಕರಿದ್ದರು ಮತ್ತು ಟಿಕೆಟ್ ನೀಡಿರುವ ಬಗ್ಗೆ ದಾಖಲೆಗಳನ್ನು ನಿರ್ವಾಹಕರಿಂದ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ನನಗೆ ಮರೆವು ಇದೆ ಎಂದು ಉತ್ತರಿಸುತ್ತಾರೆ. ನಾನು ಬಸ್‌ನ್ನು ತನಿಖೆ ಮಾಡಿಲ್ಲ ಮತ್ತು ಯಾವುದೆ ದಾಖಲೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಮತ್ತು ಚಾಸಾ 2 ರವರು

ತನಿಖೆಗಾಗಿ ಹೋಗಿದ್ದೆವು. ನಾವು ತನಿಖೆಗಾಗಿ ಹೋಗಿದ್ದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಸ್‌ನ ತನಿಖೆ ಮಾಡಿದ ಎಷ್ಟು ಗಂಟೆಯಲ್ಲ ಪೊಲೀಸ್ ಠಾಣೆಗೆ ಹೋಗಿದ್ದೇನೆ ಎಂದು ಮರೆತಿದ್ದೇನೆ. ನಾನು ಯಾವುದೇ ಬಸ್‌ನ್ನು ತನಿಖೆ ಮಾಡಿಲ್ಲ ಮತ್ತು ಪೊಲೀಸ್ ಠಾಣೆಗೆ ಹೋಗಿಲ್ಲ ಆ ಕಾರಣ ನನಗೆ ಹೇಳಲಾಗುತ್ತಿಲ್ಲ ಎಂದರೆ ಸರಿಯಲ್ಲ. ನಮಗೆ ತನಿಖೆಗೆ ಸಹಾಯವಾಗಲೆಂದು ತನಿಖೆಯ ಪೆಟ್ಟಿಗೆ ನೀಡಿರುತ್ತಾರೆ ಎಂದರೆ ಸರಿ. ಅದರಲ್ಲಿ ಅವಶ್ಯಕವಾಗಿರುವ ಕ್ಯಾಮರಾ ಮತ್ತು ರೆಕಾರ್ಡಿಂಗ್ ವ್ಯವಸ್ಥೆ ಇರುವ ಉಪಕರಣ ನೀಡುತ್ತಾರೆ ಎಂದರೆ ಸಾಕ್ಷಿ ಆ ಸಂದರ್ಭದಲ್ಲಿ ಇರಲಿಲ್ಲ ಎಂದು ಉತ್ತರಿಸುತ್ತಾರೆ. ಸಾಮಾನ್ಯವಾಗಿ ತನಿಖೆ ಪೆಟ್ಟಿಗೆಯಲ್ಲಿ ಕ್ಯಾಮರಾ ಮತ್ತು ರೆಕಾರ್ಡಿಂಗ್ ವ್ಯವಸ್ಥೆ ಇರುತ್ತದೆ ಎಂದರೆ ಸರಿ. ಆ ಸಂದರ್ಭದಲ್ಲಿ ಇರಲಿಲ್ಲ. ಆ ಸಂದರ್ಭ ಉಪಕರಣಗಳನ್ನು ನೀಡಿರಲಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಉಪಕರಣಗಳು ಇದ್ದ ಬಗ್ಗೆ ಹೇಳಿದ್ದಲ್ಲಿ ಸೂಕ್ತ ರೀತಿಯಲ್ಲಿ ತನಿಖೆ ಮಾಡದ ಬಗ್ಗೆ ತಿಳಿಯುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಮಧ್ಯಾಹ್ನ 2-30 ರ ಸಮಯದಲ್ಲಿ ನಾನು ಬಸ್‌ನಲ್ಲಿ ಫೋಟೋವನ್ನು ತೆಗೆದಿಲ್ಲ. ನಂತರ ಬೆಳಕವಾಡಿ ಬಸ್ ನಿಲ್ದಾಣದಲ್ಲಿ ಭದ್ರತ ಸಿಬ್ಬಂದಿಗಳು ಬಂದಾಗ ಫೋಟೋ ತೆಗೆದಿಲ್ಲ. ಆ ಸಂದರ್ಥಲ್ಲಿ ಸುವರ್ಣಾ ಎಂಬುವವರು ಸಹಿ ಮಾಡಿದ್ದು, ಅವರು ಯಾರು ಎಂಬ ಬಗ್ಗೆ ನಾನು ಮರೆತಿದ್ದೇನೆ. ಅವರ ಸಾಕ್ಷಿ ಹೇಳಿಕೆಗೆ ಸಹಿ ಮಾಡಿರಬಹುದು. ದಿ: 10.04.2013 ರಂದು ಸುವರ್ಣರವರು ಬಂದ ಹಾಗೆ ನೆನಪಿದೆ. ಸುವರ್ಣರವರ ಮಾತನ್ನು ಕೇಳಿ ಆರೋಪಿಯ ವಿರುದ್ದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಸುವರ್ಣ ಮತ್ತು ಆರೋಪಿಗೂ ಹಣಕಾಸಿನ ವಿಚಾರದಲ್ಲಿ ತುಂಬಾ ದಿನಗಳಿಂದ ಗೊಂದಲ ಇತ್ತು ಎಂಧು ನನಗೆ ಗೊತ್ತಿಲ್ಲ. ಸುವರ್ಣರವರು ತಮ್ಮ ಪ್ರಭಾವವನ್ನು ಬಳಸಿ ಆರೋಪಿಯನ್ನು ಅವರ ಮನೆಯಿಂದ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ದೂರನ್ನು ನಾನು ಹೇಳಿದ್ದು, ನನ್ನ ಸಹೋದ್ಯೋಗಿ ಬರೆದಿರುತ್ತಾರೆ. ದೂರನ್ನು ಚಾಸಾ 2 ರವರು ಬರೆದಿರುತ್ತಾರೆ. ನಾನು, ಚಾಸಾ 2 ರವರು, ಸುವರ್ಣ ಮತ್ತು ಪೊಲೀಸರು ಶರೀಕಾರಿ ದೂರನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಸಿಬ್ಬಂದಿ ನಕಲಿ ಪಾಸ್‌ನ್ನು ಸೃಷ್ಟಿಸಿಕೊಂಡು ಸಂಚಾರ ಮಾಡುತ್ತಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಕಲಿ ಪಾಸ್‌ನ್ನು ಬಸ್‌ನಲ್ಲಿಯೇ ವಶಪಡಿಸಿಕೊಂಡಿರುತ್ತೇನೆ. ಪಾಸ್‌ನ್ನು

ಆರೋಪಿಯಿಂದ ಬಸ್‌ನಲ್ಲಿ ಅಮಾನತ್ತು ಪಡಿಸಿಕೊಂಡಿರುವುದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 3 ಮತ್ತು 4 ಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಪಾಸ್‌ನ್ನು ನಾನು ಮತ್ತು ಚಾಸಾ 2 ರವರು ಸುವರ್ಣಾರವರಿಗೆ ಅನೂಕೂಲವಾಗಲೆಂದು ನಿಪಿ 3 ಮತ್ತು 4 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತೇನೆ. ನಾನು ದೂರು ಮತ್ತು ಮಹಜರ್‌ಗೆ ಸಹಿ ಮಾಡಿದ್ದಾಗಿ ಸುಳ್ಳು ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಮಹಜರ್‌ಗೆ ಸಹಿ ಮಾಡಿದ ಸಂದರ್ಭ ನನ್ನ ಸಮಕ್ಷಮ ಯಾರು ಸಹಿ ಮಾಡಿದ್ದಾರೆಂದು ಮರೆತಿದ್ದೇನೆ. ಮಹಜರ್‌ನಲ್ಲಿ ಬರೆದಿರುವ ವಿಚಾರ ನಾನು ಓದಿಕೊಂಡಿಲ್ಲ.

4. ದಿ: 10.04.2013 ರಂದು ಯಾವುದೇ ಬಸ್‌ನ ತನಿಖೆ ಮಾಡಿಲ್ಲ ಮತ್ತು ಆರೋಪಿಯಿಂದ ಯಾವುದೇ ಪಾಸ್‌ನ್ನು ವಶಪಡಿಸಿಕೊಮಡಿಲ್ಲ ಎಂದರೆ ಸರಿಯಲ್ಲ. ಮೇಲ್ಕಂಡ ಬಸ್‌ನಲ್ಲಿ ಆರೋಪಿ ಸಂಚರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ 02 ನಕಲಿ ಪಾಸ್‌ನ್ನು ಇಟ್ಟುಕೊಂಡಿದ್ದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಮವಸ್ತ್ರ ಧರಿಸಿರುವ ಫೋಟೋವನ್ನು ಅಂಟಿಸಿ ಆರೋಪಿ ಸಂಚರಿಸುತ್ತಿದ್ದರು ಎಂದು ಸುಳ್ಳೂ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 14/15 ರಲ್ಲಿ ಹಲವಾರು ಬಾರಿ ಸಂಚಾರ ಮಾಡಿ, 18,750/- ರೂಗಳನ್ನು ನಷ್ಟ ಪಡಿಸಿರುವುದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುವರ್ಣ ಮತ್ತು ಪೊಲೀಸರ ಮಾತು ಕೇಳಿ ನಾನು ಈ ದಿನ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೆಳಕವಾಡಿ ಬಸ್ ನಿಲ್ದಾಣದಲ್ಲಿ ಸಿಸಿ ಟಿವಿ ಇತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ